<u>ದಿನಾಂಕಃ **06-09-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ **1** ನೇ ಎದುರುದಾರರ ಪರ ಶ್ರೀ ಪಿ ಟಿ ಡಿ ವಕೀಲರಿಂದಃ</u>

ನನ್ನ ತಾಯಿಯ ಊರು ಉಡುಪಿ ತಾಲ್ಲೂಕು, ಮಂಚಿಕಲ್ಲು ಇರುತ್ತದೆ. ನನ್ನ ಗಂಡ ದಿನೇಶ್ ಇವರು ದುಬೈನಲ್ಲಿ ಕೆಲಸ ಮಾಡುತ್ತಾರೆ. ನನ್ನ ಗಂಡ ನನ್ನ ಮದುವೆ ಆಗುವ ಪೂರ್ವದಿಂದಲೂ ದುಬೈನಲ್ಲಿ ವಾಸ ಇರುತ್ತಾರೆ. ನನ್ನ ಗಂಡ ದುಬೈ ನಿಂದು ವರ್ಷಕ್ಕೆ ಒಂದು ಬಾರಿ ಮಾತ್ರ ಭಾರತಕ್ಕೆ ಬರುತ್ತಾರೆ ಎಂದರೆ ಸರಿ. ನನ್ನ ಗಂಡ ರಂಜಾನ್ ಮಾಸದಲ್ಲಿ ವರ್ಷಕ್ಕೆ ಒಂದು ಬಾರಿ ಊರಿಗೆ ಬರುತ್ತಾರೆ ಎಂದರೆ ಸರಿ. ನನ್ನ ಮಾವ ರಾಮು ಇವರು ವಿಲ್ ಬರೆದಿದ್ದು ಅದು ನನಗೆ ಮಾರ್ಚ್ 01, 2007 ರಲ್ಲಿ ಸಿಕ್ಕಿರುತ್ತದೆ. ನನ್ನ ಮಾವ ದಿನಾಂಕ 17.10.2019 ರಂದು ತೀರಿಕೊಂಡಿರುತ್ತಾರೆ. ವಿಲ್ ನನ್ನ ಗಮನಕ್ಕೆ ಬಂದಾಗ ನಾನು ಮತ್ತು ನಮ್ಮ ಮಾವ ರಾಮು ಒಟ್ಟಿಗೆ ವಾಸ ಇದ್ದೆವು ಎಂದರೆ ಸರಿ. ವಿಲ್ ಬರೆದಿರುವ ಪತ್ರವನ್ನು ನಾನು ಉಡುಪಿಯ ಗುರುರಾಜ್ ಐತಾಳ್ ವಕೀಲರಿಗೆ ತೋರಿಸಿದ್ದೆನು.

2. ನನಗೆ ವಿಲ್ ಸಿಕ್ಕ ಕಾಲಕ್ಕೆ 1 ನೇ ಎದುರುದಾರರು ಮೂಲ ದಾವೆ ಸಂಖ್ಯೆ 45/2010 ಹಾಗೂ ಎಫ್.ಡಿ.ಪಿ ಸಂಖ್ಯೆ 01/2015 ನಡೆಯುತ್ತಿದ್ದು ಸದರಿ ದಾವೆಗಳಿಗೆ ನನ್ನ ಗಂಡ ವಕೀಲರನ್ನು ಇಟ್ಟುಕೊಂಡು ಕೇಸು ನಡೆಸುತ್ತಿದ್ದರು ಎಂದರೆ ಸರಿ. ನನಗೆ ಈ ಮೇಲ್ಮನವಿಯನ್ನು ನಡೆಸಲು ನನ್ನ ಗಂಡ ದಿನಾಂಕ 28.11.2024 ರಂದು ಉಡುಪಿಯಲ್ಲಿ ಜಿ.ಪಿ.ಎ ಬರೆದುಕೊಟ್ಟಿರುತ್ತಾರೆ. ನನ್ನ ಗಂಡ ದುಬೈಯಿಂದ ಭಾರತಕ್ಕೆ ಜಿ.ಪಿ.ಎ ಬರೆದುಕೊಡುವ ಒಂದು ದಿನ ಮುಂಚಿತ ಅಂದರೆ ದಿನಾಂಕ 27.11.2024 ರಂದು ಭಾರತಕ್ಕೆ ಬಂದಿದ್ದರು. ಸಾಮಾನ್ಯವಾಗಿ ನನ್ನ ಗಂಡ ದುಬೈಯಿಂದ ಭಾರತಕ್ಕೆ ಬಂದರೆ ಮೊದಲು ಮನೆಗೆ ಬಂದು ನಂತರ ಬೇರೆ ಕಡೆ ಹೋಗುವ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂದರೆ ಸರಿ. ದಿನಾಂಕ 27.11.2024 ರಂದು ನನ್ನ ಗಂಡ ಉಡುಪಿಯಲ್ಲಿ ಲಾಡ್ಜ ನಲ್ಲಿ ಉಳಿದುಕೊಂಡಿದ್ದು ಅದರ ಹೆಸರು ನನಗೆ ನೆನಪಿರುವುದಿಲ್ಲ. ನನ್ನ ಗಂಡ ದುಬೈಯಿಂದ ಭಾರತಕ್ಕೆ ಬರುವ ವಿಚಾರವನ್ನು ಒಂದು ದಿನ ಪೂರ್ವದಲ್ಲಿ ನನಗೆ ತಿಳಿಸಿದ್ದರು.

3. ನನ್ನ ಗಂಡ ನನಗೆ ಪವರ್ ಆಫ್ ಅಟಾರ್ನಿ ಬರೆದು ಕೊಡುವ ಉದ್ದೇಶದಿಂದ ಭಾರತಕ್ಕೆ ಬರುವುದಾಗಿ ಹೇಳಿದ್ದರು. ನಾನು ಉಡುಪಿಗೆ ಹೋಗಿರುವುದಿಲ್ಲ ಆದರೆ ಅವರೆ ಜಿ.ಪಿ.ಎಯನ್ನು ತಯಾರಿಸಿ ನನಗೆ ಕಳುಹಿಸಿರುತ್ತಾರೆ. ನನಗೆ ಸದರಿ ಜಿ.ಪಿ.ಎ ದಾಖಲೆಯನ್ನು ಉಡುಪಿಯ ವಕೀಲರ ಮುಖಾಂತರ ಕಳುಹಿಸಿಕೊಟ್ಟಿರುತ್ತಾರೆ. ಸಾಕ್ಷಿಗೆ ಜಿ.ಪಿ.ಎ ಪತ್ರವನ್ನು ತೋರಿಸಲಾಗಿ ಸದರಿ ಜಿ.ಪಿ.ಎ ಪತ್ರದಲ್ಲಿ ನನ್ನದು ಎಲ್ಲಿಯೂ ಸಹ ಸಹಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಸದರಿ ದಾಖಲೆಯನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ- 1

ಎಂದು ಗುರುತಿಸಲಾಯಿತು. ದಿನಾಂಕ 28.11.2024 ರಂದು ನನ್ನ ಗಂಡ ಮೂಲ ದಾವೆ ಸಂಖ್ಯೆ 48/2024 ದಾವೆಯನ್ನು ಈ ನ್ಯಾಯಾಲಯದಲ್ಲಿ ಹೂಡಿದ್ದು ಅದರ ಬಗ್ಗೆ ನನಗೆ ತಿಳಿಸಿರುವುದಿಲ್ಲ ಹಾಗೂ ಅದರಲ್ಲಿ ನನಗೆ ಅಧಿಕಾರ ಪತ್ರ ಕೊಟ್ಟಿರುವುದಿಲ್ಲ ಎಂದರೆ ಸರಿ. ದಿನಾಂಕ 27.11.2024 ಹಾಗೂ ದಿನಾಂಕ 28.11.2024 ರಂದು ನನ್ನ ಗಂಡ ದುಬೈನಿಂದ ಭಾರತಕ್ಕೆ ಬಂದಿರುವುದಿಲ್ಲ ನಾನು ಮತ್ತು ವಕೀಲರು ಸೇರಿ ಸದರಿ ಜಿ.ಪಿ.ಎ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಜಿ.ಪಿ.ಎ ಪತ್ರದಲ್ಲಿ ಇರುವ ಸಹಿಗಳು ನನ್ನ ಗಂಡನದು ಇರುವುದಿಲ್ಲ ಎಂದರೆ ಸರಿಯಲ್ಲ.

4. ನನ್ನ ಕಾಳ ವಿಳಂಬ ಮನ್ನಾ ಅರ್ಜಿಯಲ್ಲಿ ಎಷ್ಟು ದಿನಗಳ ಕಾಲ ಮೇಲ್ಮನವಿಯನ್ನು ಸಲ್ಲಿಸಲು ವಿಳಂಬವಾಗಿರುತ್ತದೆ ಎಂಬುದರ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಜಿ.ಪಿ.ಎ ಪತ್ರಕ್ಕೆ ನಾನು ಸಹಿ ಮಾಡಿದೇ ಇರುವ ಕಾರಣ ಸದರಿ ಪತ್ರದ ಆಧಾರದ ಮೇಲೆ ನನಗೆ ಮೇಲ್ಮನವಿ ಸಲ್ಲಿಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರ 1 ಮತ್ತು 3 ರವರಿಗೆ ತೊಂದರೆ ಕೊಡುವ ಸಲುವಾಗಿ ನನ್ನ ಗಂಡನ ಚಿತಾವಣೆ ಮೇರೆಗೆ ದಾಖಲೆಯನ್ನು ಸೃಷ್ಟಿಸಿ ಈ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಎದುರುದಾರ 2, 4 ರಿಂದ 7 ರ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆಃ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ